# ಎಲ್ಲಿಹೋದವು ಪ್ರೇಮಗೀತೆಗಳು?

ದಶಕಗಳ ಹಿಂದೆ ಸುಗಮ ಸಂಗೀತಕಾರರ ಕೃಪೆಯಿಂದ ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿ, ಅಡಿಗ, ಶಿವರುದ್ರಪ್ಪ, ನಿಸಾರ್ ಕವಿತೆಗಳು, ಜನಪದ ಗೀತೆಗಳು ಹಲವರ ಕಿವಿಗಳ ಮೇಲೆ ಬೀಳುವಂತಾದವು. ಕಾವ್ಯ ಜನಸಾಮಾನ್ಯರನ್ನೂ ಮುಟ್ಟುವಂತಾದ ಸುವರ್ಣಯುಗ ಅದು. ಹಾಗೆ ಕಿವಿಗೆ ಬೀಳುವಲ್ಲಿ ಪ್ರೇಮಕವನಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು ಎಂಬುದನ್ನು ಬೇರೆ ಹೇಳಬೇಕಿಲ್ಲ. ಆ ಜನಪ್ರಿಯತೆಯ ಪ್ರವಾಹದಲ್ಲಿ ಹತ್ತಾರು ಪ್ರೇಮಕವಿಗಳು ಹುಟ್ಟಿಕೊಂಡರು. ಈ ಪ್ರೇಮಗೀತೆಗಳು ನೂರಾರು ಮನಸ್ಸುಗಳನ್ನು ಅರಳಿಸಿದವು ಮಾತ್ರವಲ್ಲ, ಬದುಕಿಗೆ ಹೊಸ ಹುಮ್ಮಸ್ಸು, ಲವಲವಿಕೆ ತಂದವು.

ಪ್ರೇಮ–ಕಾಮದ ಕವಿತೆಗಳಿಗೆ ಓದುಗರನ್ನು, ಕೇಳುಗರನ್ನು ತಕ್ಷಣಕ್ಕೆ ಸೆಳೆಯಬಲ್ಲ ಮಾಂತ್ರಿಕ ಗುಣ ಇದೆ; ಜೀವರಸವನ್ನು ಉಕ್ಕಿಸಬಲ್ಲ ಅದರ ಚೈತನ್ಯದಾಯೀ ರೀತಿಗೆ ಪರವಶಗೊಳ್ಳದವರಿಲ್ಲ. ಹಿಂದಿನ ತಲೆಮಾರಿನವರು ಹಿರಿಯ ಕವಿಗಳ ಕವನಗಳನ್ನು ಹಾಡಿಕೊಳ್ಳುತ್ತ, ಪತ್ರಗಳಲ್ಲಿ ಬರೆದುಕೊಳ್ಳುತ್ತ ಪ್ರೀತಿ ಮಾಡಿದರು. ತಕ್ಷಣಕ್ಕೆ ಮಾತು ಹೊಮ್ಮಿಸಲಾಗದ ಪ್ರೀತಿಗೆ, ಕಾಮದ ತೀವ್ರತೆಗೆ ಮಾತು ಕೊಟ್ಟಿದ್ದು ಈ ಕವನಗಳೇ. ಬರೆದವರು ಯಾರೇ ಇರಬಹುದು. ಈ ಕವನಗಳು ಆ ಕ್ಷಣದ ಭಾವನೆಗೆ ಮಿಂಚಿನಂತಹ ಕೆಲ ಸಾಲುಗಳನ್ನು ಕೊಟ್ಟು ರಸಿಕರನ್ನು ರೋಮಾಂಚಿತರನ್ನಾಗಿ ಮಾಡಿವೆ; ನಲ್ಲ ನಲ್ಲೆಯರ ಒಲವಿನ ಬಳ್ಳಿ ಸದಾಹಸಿರಾಗಿರುವಂತೆ ಮಾಡಿವೆ.

ಪ್ರೇಮ–ಕಾಮದ ಮಧುರ ಯಾತನೆಯನ್ನು ನೇವರಿಸುವಂತೆ ಮಾಡುವ ಕವನಗಳು ಇದ್ದಕ್ಕಿದ್ದಂತೆ ಕಡಿಮೆಯಾದವು; ಇಲ್ಲವೇ ಆ ತೀವ್ರತೆ ಮಾಯವಾಯಿತು. ಜಗದ ದೈನಿಕದ ಪ್ರತಿಕ್ಷಣದ ಚಟುವಟಿಕೆಯಾದ ಪ್ರೀತಿ–ಪ್ರೇಮಕ್ಕೆ ಮಾತಿನಅಂಗಿ ತೊಡಿಸುವ ಕುಶಲ ಕಸುಬುಗಾರಿಕೆಯನ್ನು ಈಚಿನ ಕನ್ನಡಕವಿಗಳು ಕೈಬಿಟ್ಟರು. ಪ್ರತಿ ತಲೆಮಾರೂ ಪ್ರೇಮದ ಹೊಸ ನುಡಿಗಟ್ಟಿಗೆ ಕಾಯುತ್ತಿರುತ್ತದೆ. ಅದು ಕಡಿಮೆಯಾದ್ದರಿಂದಲೇ ನಮ್ಮ ರಸಿಕರು ಸಿನಿಮಾ ಹಾಡುಗಳಿಗೆ ಕಿವಿಯಾಗಬೇಕಾಯಿತು; ಇಲ್ಲವೇ ಹಳೆಯ ಕವನಗಳಿಗೆ ಹಿಂತಿರುಗಬೇಕಾಯಿತು. ಇಂತಹ ಸುಮಧುರ ಭಾವಗಳ ನವಿರು ಬಟ್ಟೆಯನ್ನು ಹೊಲೆಯಲೂ ಈಚಿನ ಕವಿಗಳು ಚೌಕಾಸಿ ಮಾಡಿದ್ದು ಯಾಕೆ ಎಂಬುದು ಕೊಂಚ ಗುಟ್ಟಾಗಿಯೇ ಉಳಿದಿದೆ. ಅದನ್ನು ತಿಳಿದುಕೊಳ್ಳುವ ಪ್ರಯತ್ನದ ಭಾಗವಾಗಿ 'ಪ್ರೇಮವೆನಲು ಹಾಸ್ಯವೆ' ಈ ಸಂಚಿಕೆಯಲ್ಲಿದೆ. ಪ್ರೇಮ–ಕಾಮ ಕವನಗಳ ಕುರಿತಾಗಿ ಇಲ್ಲಿ ಬರೆದಿರುವ ಪ್ರತಿಭಾವಂತ ಕವಿಗಳು ಇಂತಹ ಕವನಗಳ ಗೈರುಹಾಜರಿಯ ಕುರಿತು ತಮ್ಮದೇ ನೋಟಗಳನ್ನು ಕೊಟ್ಟಿದ್ದಾರೆ.



ಕನ್ನಡದ ಕತೆಗಾರ ಫಕೀರ ಮುಹಮ್ಮದ್ ಕಟ್ಪಾಡಿ ಅವರ ಸಂದರ್ಶನ ಈ ಸಂಚಿಕೆಯಲ್ಲಿದೆ. ನಮ್ಮ ಸಮಾಜವನ್ನು ನಿಧಾನವಾಗಿ ಕೊಲ್ಲುತ್ತಿರುವ ಕೋಮುವಾದದ ಕುರಿತಂತೆ ಅವರು ವ್ಯಕ್ತಪಡಿಸಿರುವ ಆತಂಕ ಸಕಾಲಿಕ ಮತ್ತು ಸಹಜವಾಗಿದೆ. ಅದು ಎಲ್ಲ ಕಾಲದ ಸೂಕ್ಷ್ಮಜ್ಞರ, ಸಂವೇದನಾಶೀಲರ ಆತಂಕ ಕೂಡ. ಅವರೊಂದಿಗೆ ಈ ಸಂಚಿಕೆಯಲ್ಲಿರುವ ವಿವಿಧ ತಲೆಮಾರಿನ ಲೇಖಕರ ಬರಹಗಳು ಓದುಗರನ್ನು ಖುಷಿಗೊಳಿಸಬಲ್ಲವು.

**ಸಂದೀಪ ನಾಯಕ**